# <u>ಪತ್ರಿಕಾ ಪ್ರಕಟಣೆ</u>

**ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯವತಿಯಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ, ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ನೇಮಕಾತಿ ಕುರಿತಂತೆ, ಉತ್ತರಕನ್ನಡ ಜಿಲ್ಲೆಯ, ಜಿಲ್ಲಾ ಕೇಂದ್ರ ಕಾರವಾರದಲ್ಲಿ ದಿನಾಂಕ; 18-10-2020 ರಂದು ಲಿಖಿತ ಪರೀಕ್ಷೆಯನ್ನು** ನಡೆಸಲಾಗುವುದು. ಅರ್ಹ ಎಲ್ಲಾ ಆನ್ ಲೈನ್ (On line) ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಪ್ರವೇಶ ಪತ್ರವನ್ನು ವೆಬ್ ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ್ದು, ಅವರು ಅದನ್ನು ಡೌನ್ ಲೋಡ ಮಾಡಿಕೊಳ್ಳುವುದು. ಪರೀಕ್ಷೆಯ ಬಗ್ಗೆ ಅಭ್ಯರ್ಥಿಗಳು ಈ ಕೆಳಗಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

**<u>ಸೂಚನೆಗಳು :</u>**

- **ಲಿಖಿತ ಪರೀಕ್ಷೆಯನ್ನು ನಡೆಸುವ ಕುರಿತು ವಿವರವಾದ ಸೂಚನೆಗಳು ಕಛೇರಿಯ ಅಧಿಕೃತ ವೆಬ್‌ಸೈಟ್ http:// pcnhk17.ksp-online.in or <u>www.ksp.gov.in</u>** <u>http://www.ksp.gov.in</u> **ನಲ್ಲಿ ಲಭ್ಯವಿರುತ್ತವೆ.**
- **ಪ್ರವೇಶ ಪತ್ರವನ್ನು ಪಡೆದುಕೊಂಡ ಕೂಡಲೇ ಅದರಲ್ಲಿನ ವಿವರಗಳನ್ನು ಪರಿಶೀಲಿಸಿಕೊಳ್ಳುವುದು. ಈ ಲಿಖಿತ ಪರೀಕ್ಷೆಯ ಪ್ರವೇಶ ಪತ್ರವನ್ನು ನೇಮಕಾತಿ ಪೂರ್ಣಗೊಳುವವರೆಗೆ ಸುರಕ್ಷಿತವಾಗಿ ಇಟ್ಟುಕೊಳ್ಳತಕ್ಕದ್ದು.**
- **ಪ್ರವೇಶ ಪತ್ರವನ್ನು ಪಡೆದುಕೊಂಡ ಕೂಡಲೇ ಪರೀಕ್ಷಾಕೇಂದ್ರ / ಕೊಠಡಿಗೆ ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.**
- **ಅಭ್ಯರ್ಥಿಗಳು ಭಾವಚಿತ್ರವುಳ್ಳ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಲು ಸೂಚಿಸಲಾಗಿದೆ. ಮತ್ತು ನಿಗದಿ ಪಡಿಸಲಾಗಿರುವ ಲಿಖಿತ ಪರೀಕ್ಷಾ ಕೇಂದ್ರವನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲಾಗುವುದಿಲ್ಲ.**
- **ಪರೀಕ್ಷಾ ಕೊಠಡಿಯೊಳಗೆ ಯಾವುದೇ ಇತರೆ ನಕಲು ವಸ್ತು, ಪೇಜರ್ಸ್ ಮೊಬೈಲ್ ಫೋನ್ಸ್, ಕ್ಯಾಲಕುಲೇಟರ್ ಇತ್ಯಾದಿ ಸೇರಿದಂತೆ ಪುಸ್ತಕಗಳು, ಕಾಪಿ ಚೀಟಿಗಳು, ಟಿಪ್ಪಣಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿಷೇದಿಸಲಾಗಿದೆ. ಯಾವುದೇ ನಕಲು ವಸ್ತುಗಳು ಇಟ್ಟುಕೊಂಡಿರುವುದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಯ ಅಭ್ಯರ್ಥಿತನವನ್ನು ರದ್ದು ಪಡಿಸಲಾಗುವುದು.**
- **ಅಭ್ಯರ್ಥಿಗಳು ತಮ್ಮ ಸ್ಥಾನವನ್ನು ತಿಳಿದುಕೊಳ್ಳುವುದಕ್ಕಾಗಿ ಪರೀಕ್ಷೆ ಪ್ರಾರಂಭವಾಗುವ 60 ನಿಮಿಷಗಳ ಮುಂಚಿತವಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಿರಲು ಸಲಹೆ ನೀಡಲಾಗಿದೆ. ಪರೀಕ್ಷಾ ಪ್ರಾರಂಭಕ್ಕೆ 20 ನಿಮಿಷ ಮುಂಚಿತವಾಗಿ ಅಭ್ಯರ್ಥಿಯು ಪರೀಕ್ಷಾ ಕೊಠಡಿಯೊಳಗೆ ಹಾಜರಾಗಬೇಕು. ಪರೀಕ್ಷೆ ಪ್ರಾರಂಭವಾದ 10 ನಿಮಿಷಗಳ ನಂತರ ಬರುವ ಯಾವುದೇ ಅಭ್ಯರ್ಥಿಗೆ ಪರೀಕ್ಷಾ ಕೊಠಡಿಗೆ ಪ್ರವೇಶ ನೀಡಲಾಗುವುದಿಲ್ಲ. ಪರೀಕ್ಷೆಗೆ ನಿಗದಿ ಪಡಿಸಿದ ಪೂರ್ಣ ಅವಧಿಯು ಮುಗಿಯುವವರೆಗೆ ಯಾವುದೇ ಅಭ್ಯರ್ಥಿಯು ಹೊರ ಹೋಗುವಂತಿಲ್ಲ.**
- **ಅಭ್ಯರ್ಥಿಗಳು ನಾಮಿನಲ್ ರೋಲ್‌ನಲ್ಲಿ ಮುದ್ರಿತವಾಗಿರುವ ತಮ್ಮ ಹೆಸರು, ಭಾವಚಿತ್ರ ಹಾಗೂ ನೋಂದಣಿ ಸಂಖ್ಯೆಯನ್ನು ಖಚಿತ ಪಡಿಸಿಕೊಂಡ ನಂತರವೇ ನಾಮಿನಲ್‌ರೋಲ್‌ನಲ್ಲಿ ನಿಗದಿಪಡಿಸಿದ ಅಂಕಣಗಳಲ್ಲಿ ವಿವರಗಳನ್ನು ಎಚ್ಚರ ವಹಿಸಿ ಭರ್ತಿಮಾಡಿ ಸಹಿ ಹಾಕಬೇಕು.**
- **ಪ್ರವೇಶ ಪತ್ರದಲ್ಲಿರುವ ಅರ್ಜಿ ಸಂಖ್ಯೆ, ನೋಂದಣಿ ಸಂಖ್ಯೆ ಮತ್ತು ಹಂಚಿಕೆ ಮಾಡಿದ ಪ್ರಶ್ನೆ ಪತ್ರಿಕೆ ಶ್ರೇಣಿಯನ್ನು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ನಮೂದಿಸಿ ಸಂಬಂಧಿತ ವೃತ್ತಗಳನ್ನು ಕಡ್ಡಾಯವಾಗಿ ಸರಿಯಾಗಿ ಗುರುತು ಮಾಡಬೇಕು. ತಪ್ಪಿದ್ದಲ್ಲಿ ಉತ್ತರ ಹಾಳೆಯನ್ನು / OMR ಹಾಳೆಯನ್ನು ಮೌಲ್ಯಮಾಪನಗೊಳಿಸದೆ ರದ್ದುಗೊಳಿಸಲಾಗುವುದು. ಲಿಖಿತ ಪರೀಕ್ಷೆಯ ನಂತರ ಅವುಗಳನ್ನು ಭರ್ತಿ ಮಾಡುವಂತೆ ಕೋರಿದಲ್ಲಿ ಅಂತಹ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಅರ್ಜಿ ಸಂಖ್ಯೆ ಮತ್ತು ಪ್ರಶ್ನೆ ಪತ್ರಿಕೆಯ ಶ್ರೇಣಿಯನ್ನು ತಪ್ಪಾಗಿ ನಮೂದಿಸಿದ್ದಲ್ಲಿ ಅಥವಾ ನಮೂದು ಮಾಡದೆ ಬಿಟ್ಟಲ್ಲಿ ಈ ಬಗ್ಗೆ ನೇಮಕಾತಿ ಸಮಿತಿ ಕೈಗೊಳ್ಳುವ ಕ್ರಮವು ಅಂತಿಮವಾಗಿರುತ್ತದೆ.**
- **ಅಭ್ಯರ್ಥಿಗಳು ಕಪ್ಪು/ನೀಲಿ ಬಾಲ್‌ಪಾಯಿಂಟ್ ಪೆನ್ನು ತರತಕ್ಕದ್ದು. ಬ್ಲೇಡ್, ರಬ್ಬರ್ ಅಥವಾ ವೈಟ್‌ನರ್ (Correcting Fluid) ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.**
- **ಓ.ಎಂ.ಆರ್. ಉತ್ತರ ಹಾಳೆಯು ಹಾಳಾಗದಂತೆ ಎಚ್ಚರ ವಹಿಸುವುದು ಹಾಗೂ ಓ.ಎಂ.ಆರ್ ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ಹಿಂದಿರುಗಿಸುವಾಗ ತಪ್ಪದೆ ತಮ್ಮ ನೋಂದಣಿ ಸಂಖ್ಯೆ ಸರಿಯಾಗಿ ಬರೆದಿರುವುದನ್ನು ಹಾಗೂ ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಿ ಮತ್ತು ಪ್ರವೇಶ ಪತ್ರದಲ್ಲಿಯೂ ಸಹ ಸಹಿ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು.**
- **ಪ್ರಶ್ನೆ ಪತ್ರಿಕೆಯನ್ನುಆಂಗ್ಲ ಮತ್ತು ಕನ್ನಡ ಮಾಧ್ಯಮದಲ್ಲಿ ಮುದ್ರಿಸಲಾಗಿದೆ. ಕನ್ನಡ ಭಾಷೆಯಲ್ಲಿರುವ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಅಸ್ಪಷ್ಟತೆ ಇದ್ದಲ್ಲಿ ಆಂಗ್ಲ ಭಾಷೆಯಲ್ಲಿರುವ ಪ್ರಶ್ನೆಗಳನ್ನು ನೋಡತಕ್ಕದ್ದು.**

- ಪ್ರಶ್ನೆ ಪತ್ರಿಕೆಯನ್ನು ಪಡೆದ ತಕ್ಷಣ ಅದರಲ್ಲಿ ಏನಾದರೂ ಲೋಪದೋಷಗಳಿದ್ದಲ್ಲಿ ಪ್ರಾರಂಭದಲ್ಲಿಯೇ ಪರೀಕ್ಷಿಸಿ ಕೊಳ್ಳಬೇಕು ಏಕೆಂದರೆ ಓಎಂಆರ್ ಉತ್ತರ ಪತ್ರಿಕೆಯಲ್ಲಿ ಉತ್ತರಗಳನ್ನು ಭರ್ತಿ ಮಾಡಿದ ನಂತರ ಪ್ರಶ್ನೆ ಪತ್ರಿಕೆ ಬದಲಾವಣೆಗೆ ಅವಕಾಶವಿರುವುದಿಲ್ಲ.
- ಪ್ರಶ್ನೆ ಪತ್ರಿಕೆಯಲ್ಲಿ ಯಾವುದಾದರೂ ಲೋಪ ದೋಷಗಳು ಕಂಡುಬಂದಲ್ಲಿ ಪರೀಕ್ಷಾಕೇಂದ್ರದ ಮುಖ್ಯ ಮೇಲ್ವಿಚಾರಕರಿಗೆ ಲಿಖಿತರೂಪದಲ್ಲಿ ಪರೀಕ್ಷಾ ದಿನವೇ ಮನವಿಯನ್ನು ಸಲ್ಲಿಸಿ ಸ್ವೀಕೃತಿಯನ್ನು ಪಡೆಯತಕ್ಕದ್ದು. ಲಿಖಿತ ಪರೀಕ್ಷೆಯ ನಂತರ ಸಲ್ಲಿಸುವ ಯಾವುದೇ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.
- ಪ್ರವೇಶ ಪತ್ರದಲ್ಲಿ ಅಭ್ಯರ್ಥಿಯ ಭಾವಚಿತ್ರ ಮುದ್ರಿತವಾಗದಿದ್ದಲ್ಲಿ ಅಥವಾ ಸ್ಪಷ್ಟವಾಗಿಲ್ಲದಿದ್ದಲ್ಲಿ, ಅಭ್ಯರ್ಥಿಯು ಪರೀಕ್ಷಾ ದಿನದಂದು ಪ್ರವೇಶ ಪತ್ರದೊಂದಿಗೆಎರಡು ಸ್ಟ್ಯಾಂಪ್ ಅಳತೆಯ (**Stamp Size**) ಭಾವಚಿತ್ರಗಳನ್ನು ಕಡ್ಡಾಯವಾಗಿ ತರತಕ್ಕದ್ದು. ಭಾವಚಿತ್ರಗಳನ್ನು ಸಂವೀಕ್ಷಕರಿಗೆ ನೀಡಿ ನಾಮಿನಲ್‌ರೋಲ್‌ನಲ್ಲಿನ ನಿಗದಿತ ಅಂಕಣದಲ್ಲಿ ಅಂಟಿಸಿ ದೃಢೀಕರಿಸುವಂತೆ ತಿಳಿಸುವುದು.
- ಅಭ್ಯರ್ಥಿಗಳು ಪರೀಕ್ಷಾ ಕೇಂದ್ರವನ್ನು ಪ್ರವೇಶಿಸುವ ಮುನ್ನ ತಪ್ಪದೇ **Temperature Check** ಅನ್ನು ಮಾಡಿಸಿಕೊಳ್ಳುವುದು ಕಡ್ಡಾಯವಾಗಿ **Mask** ಹಾಗೂ **Sanitiser** ಬಳಸುವುದು.
- ಅಭ್ಯರ್ಥಿಗಳು ಪರೀಕ್ಷಾ ಕೇಂದ್ರವನ್ನು ಹಾಗೂ ಪರೀಕ್ಷಾ ಕೊಠಡಿಯನ್ನು ಪ್ರವೇಶಿಸುವಾಗ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.
- ದುರ್ನಡತೆ : ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂದು, ತಪ್ಪಿತಸ್ಥನೆಂದು ಕಂಡುಬಂದಲ್ಲಿ ಅಥವಾ ಒಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗಳಿಗೆ ಹಾಜರಾಗಿರುವ ವಿಷಯವನ್ನು ಮರೆಮಾಚಿ ಮತ್ತೊಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗೆ ಹಾಜರಾಗಿದ್ದರೆ ಹಾಗೂ ನೇಮಕಾತಿ ಸಮಿತಿಯಿಂದ ನೀಡಲಾದ ಯಾವುದೇ ಸೂಚನೆಗಳ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ನೇಮಕಾತಿ ಸಮಿತಿ ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

**ಪರೀಕ್ಷಾ ಕೇಂದ್ರಗಳ ಮಾಹಿತಿ**

| SL No | College Details | College Capacity |
|---|---|---|
| 1. | St. Micheal`s High School, Karwar | 260 |
| 2. | Hindu High School, Karwar | 220 |
| 3. | Bala Mandir, Karwar | 320 |
| 4. | Govt. PU College, Karwar | 240 |
| 5. | Bapuji Collage, Sadashivgad, Karwar | 240 |
| 6. | Divekar Commerce Degree & Pre University College, Karwar. | 400 |
| 7. | RahimKhan Unity High School, Karwar | 240 |
| 8. | St. Joseph's English Medium School, Karwar | 240 |
| 9. | Shivaji Arts & Commerce College, Baad Karwar. | 200 |
| 10. | Shivaji Pre University College Baad, Karwar | 220 |
| 11. | Premier Science & Commerce PU College Baad, Karwar. | 240 |
| 12. | Shivaji Composite Pre University Mahavidyalaya , Sadashivagad, Karwar. | 360 |
| 13. | Govt. Arts & Science Collage, Karwar. | 700 |
| | **Total** | **3880** |

**ವಿಶೇಷ ಸೂಚನೆ**: ಯಾರಾದರೂ ನೌಕರಿ ಕೊಡಿಸುವುದಾಗಿ ಆಮಿಷವೊಡ್ಡುವ ದಲ್ಲಾಳಿಗಳ ವದಂತಿಗಳಿಗೆ ಕಿವಿಗೊಡದೆ ಇರುವಂತೆ ಸೂಚಿಸಲಾಗಿದೆ. ಅಂತಹ ವ್ಯಕ್ತಿಗಳು ಕಂಡುಬಂದಲ್ಲಿ ಕೂಡಲೇ ಪೊಲೀಸ್ ಕಂಟ್ರೋಲ್ ರೂಂ, ಕಾರವಾರಕ್ಕೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ.

ಸಂಪರ್ಕಕ್ಕಾಗಿ: 9480805200 (ಪೊಲೀಸ್ ಕಂಟ್ರೋಲ್ ರೂಂ, ಕಾರವಾರ)
08382-226550 (ಪೊಲೀಸ್ ಕಂಟ್ರೋಲ್ ರೂಂ, ಕಾರವಾರ)
ಸ್ಥಳೀಯ ಪೊಲೀಸ್ ಠಾಣೆ: ಕಾರವಾರ ಶಹರ - 08382 - 226333,
ಕಾರವಾರ ಗ್ರಾಮೀಣ - 08382 - 222443
ಕಾರವಾರ ಸಂಚಾರ - 08382 - 228333.

**ಎಚ್ಚರಿಕೆ:**

ಕರ್ನಾಟಕ ರಾಜ್ಯದ ಪೊಲೀಸ್ ನೇಮಕಾತಿಯು ಪಾರದರ್ಶಕ, ಗಣಕೀಕೃತ, ಸಂಪೂರ್ಣ ವಸ್ತು ನಿಷ್ಠ, ಅರ್ಹತೆ ಮತ್ತು ಮೀಸಲಾತಿ ಆಧಾರದ ಮೇಲೆ ನಡೆಯುತ್ತದೆ. ಯಾವುದೇ ಅಭ್ಯರ್ಥಿಯು ಇಲಾಖೆಯ ಹೊರಗಾಗಲೀ ಅಥವಾ ಒಳಗಾಗಲೀ ಉದ್ಯೋಗ ಪಡೆಯುವ ಸಲುವಾಗಿ ಯಾವುದೇ ವ್ಯಕ್ತಿಗೆ ಹಣ ನೀಡುವುದು ಅಥವಾ ಯಾವುದೇ ವಿಧವಾದ ಪಾರತೋಷಕ ನೀಡುವುದು ಮಾಡಬಾರದು. ಯಾವುದೇ ವಿಧವಾದ ಹಣ ವಸೂಲಾತಿಗೆ ಯಾರಿಗೂ ಅಧಿಕಾರ ನೀಡಿರುವುದಿಲ್ಲ. ಈ ದಿಶೆಯಲ್ಲಿ ಮಧ್ಯವರ್ತಿಗಳ ಭರವಸೆಗಳಿಗೆ ಮಾರು ಹೋಗಬಾರದೆಂದು ಈ ಮೂಲಕ ಅಭ್ಯರ್ಥಿಗಳಿಗೆ ಎಚ್ಚರಿಗೆ ನೀಡಲಾಗಿದೆ.

ಭ್ರಷ್ಟಚಾರದ ಕುರಿತು ಏನಾದರೂ ದೂರುಗಳಿದ್ದಲ್ಲಿ ಈ ಕೆಳಕಂಡ ವಿಳಾಸಕ್ಕೆ/ದೂರವಾಣಿ ಸಂಖ್ಯೆಗೆ ತಿಳಿಸತಕ್ಕದ್ದು.

**ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು,** ನೇಮಕಾತಿ ಮತ್ತು ತರಬೇತಿ ಕಾರ್ಲಟನ್ ಭವನ,
ಅರಮನೆ ರಸ್ತೆ, ಬೆಂಗಳೂರು- 560001. ದೂ: 080-22943650.

**ಪೊಲೀಸ್ ಉಪ ಮಹಾನಿರೀಕ್ಷಕರು,** ನೇಮಕಾತಿ, ಕಾರ್ಲಟನ್ ಭವನ, ಅರಮನೆ ರಸ್ತೆ, ಬೆಂಗಳೂರು -560001. ದೂ: 080-22942261.

ಸ್ಥಳ : ಕಾರವಾರ
**ದಿನಾಂಕ** : **14/10/2020**
**ಕಾರವಾರ**.

**ಸಾರ್ವಜನಿಕ ಸಂಪಕ ಅಧಿಕಾರಿಗಳು,**
**ಜಿಲ್ಲಾ ಪೊಲೀಸ್ ಕಛೇರಿ,**